4) ಬೊಮ್ಮರಸನಹಳ್ಳಿ ಹತ್ತಿರ ಹೊಸ ಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 3.76 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪ್ರಗತಿಯಲ್ಲಿದೆ. ಹಳ್ಳದ ಭಾಗದ ಮತ್ತು ಎಡ ಭಾಗದ ಏರಿ ಒಂದು ತೂಬು ಮತ್ತು ಕೋಡಿ ಕೆಲಸ ಮಾಡಬೇಕಾಗಿದೆ.
5) ಮಾರಶೆಟ್ಟಿ ಹತ್ತಿರ ಹೊಸಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 4.93 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪ್ರಗತಿಯಲ್ಲಿದೆ. ಹಳ್ಳದ ಭಾಗ, ಎಡಭಾಗದ ಏರಿ, ತೂಬು, ಕೋಡಿ ಕೆಲಸ ಮಾಡಬೇಕಾಗಿದೆ.

ವಿಷಯ :– ಕೈಮಗ್ಗದ ನಿರ್ದೇಶನಾಲಯದ ಬಗೆಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 508 (847)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) :– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೈಮಗ್ಗ ನಿರ್ದೇಶನಾಲಯವನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು ಮತ್ತು ಇಲ್ಲಿಯವರೆಗೆ ಅದು ಕೈಮಗ್ಗ ಕ್ಷೇತ್ರಕ್ಕೆ ಸಲ್ಲಿಸಿದ ಕಾರ್ಯಕ್ರಮಗಳೇನು ?

ಆ) ಗಣನೀಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲದ ನಿರ್ದೇಶನಾಲಯದ ಬಗ್ಗೆ ಕೈಮಗ್ಗ ಕ್ಷೇತ್ರದವರಿಗೆ ಅರಿವಿಲ್ಲದ ರೀತಿಯಲ್ಲಿ ಈ ನಿರ್ದೇಶನಾಲಯವು ನಿಷ್ಕ್ರಿಯವಾಗಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಕೈಮಗ್ಗ ನಿರ್ದೇಶನಾಲಯದ ಹೊಣೆ ಮತ್ತು ಜವಾಬ್ದಾರಿಗಳಿಗನುಗುಣವಾಗಿ ಅದು ಕೈಮಗ್ಗ ಕ್ಷೇತ್ರಕ್ಕೆ ಹಮ್ಮಿಕೊಂಡ ಕಾರ್ಯಕ್ರಮಗಳೇನು ಅವುಗಳಲ್ಲಿ ಯಾವುದನ್ನು ಕಾರ್ಯಗತಗೊಳಿಸಲಾಗಿದೆ?

ಈ) ಕೈಮಗ್ಗ ನಿರ್ದೇಶನಾಲಯವು ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಇನ್ನಾದರೂ ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ನಸೀರ್ ಅಹ್ಮದ (ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) :–

ಅ) ಸರ್ಕಾರಿ ಆದೇಶ ಸಂಖ್ಯೆ ಸಿಐ/285/ಐಸಿಎಸ್ 86 ದಿ. 3–6–1988ರಲ್ಲಿ ಕರ್ನಾಟಕದಲ್ಲಿ ಒಂದು ಪ್ರತ್ಯೇಕವಾದ ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯವನ್ನು ಸ್ಥಾಪಿಸಲು ಆದೇಶ ಹೊರಡಿಸಲಾಗಿದೆ.

ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯದಲ್ಲಿ ಹೊಸದಾಗಿ ಸೃಷ್ಟಿಸಲಾದ ಅಪರ ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯ, ಈ ಹುದ್ದೆಗೆ ಅಧಿಕಾರಿಯನ್ನು ನೇಮಕಾತಿ ಮಾಡಿಲ್ಲದ ಕಾರಣ ಈ ನಿರ್ದೇಶನಾಲಯವು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಆ) ಹೌದು. ಹೊಸದಾಗಿ ಸೃಷ್ಟಿಸಲಾದ ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯವು ತನ್ನ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ. ಆದರೆ; ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಕಾರ್ಯಯೋಜನೆಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವೇ ಜಾರಿಗೊಳಿಸುತ್ತಿದೆ.

ಇ) ಉದ್ಭವಿಸುವುದಿಲ್ಲ. ಹೊಸದಾಗಿ ಸೃಷ್ಟಿಸಲಾದ ನಿರ್ದೇಶನಾಲಯವು ಕಾರ್ಯಾರಂಭ ಮಾಡಬೇಕಾಗಿದ್ದು ಅದರ ಕಾರ್ಯವ್ಯಾಪ್ತಿಯು ರಾಜ್ಯದಲ್ಲಿರುವ ವಿದ್ಯುತ್ ಚಾಲಿತ ಮಗ್ಗಗಳು ಮತ್ತು ಜವಳಿ ಉದ್ಯಮದ ವಿವಿಧ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ನೇಕಾರರಿಗೆ ಉತ್ತಮ ಅವಕಾಶಗಳನ್ನು ಒದಗಿಸುವುದಾಗಿರುತ್ತದೆ. ಆದರೆ, ಈ ಕಾರ್ಯಕ್ರಮಗಳನ್ನು ಸದ್ಯಕ್ಕೆ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವೇ ಜಾರಿಗೊಳಿಸುತ್ತದೆ.

ಈ) ಹೌದು. ಆದಷ್ಟು ಬೇಗನೆ ಕ್ರಮ ಕೈಗೊಳ್ಳಲಾಗುವುದು.